# ಜುಮುಕಿ ಹೂ

■ ಚಿತ್ರ ಬರಹ:
**ಡಾ. ಎಂ. ವಸುಂಧರಾ**

**ಕೊ**ಡೈಕೆನಾಲ್‌ಗೆ ಒಮ್ಮೆ ಹೋಗಿದ್ದಾಗ ಅಲ್ಲಿ ಕಂಡ ದಟ್ಟ ಕೆಂಪನೆಯ ಗಡಿಯಾರದ ಹೂವಿನ ಬಳ್ಳಿ ನನ್ನನ್ನು ಮೋಡಿ ಮಾಡಿತು. ಆ ಬಳ್ಳಿಯ ಒಂದು ಗಿಡವೂ ನನಗೆ ಆ ಊರಿನ ನರ್ಸರಿಗಳಲ್ಲಿ ದೊರಕಲಿಲ್ಲ. ಆ ಬಳ್ಳಿಯ ಒಂದೇ ಒಂದು ಕಡ್ಡಿಯಾದರೂ ಸಿಕ್ಕರೆ ಅಂತ ಹಂಬಲಿಸಿದೆ. ಆ ಬಳಿಕ ಯಾವುದೇ ನರ್ಸರಿಗೆ ಹೋದರೂ ಆ ಬಳ್ಳಿಯದ್ದೇ ಚಿಂತೆ.

ಕೆಲವು ತಿಂಗಳ ನಂತರ ಬೆಂಗಳೂರಿನ ಹುಳಿಮಾವಿನ ತೋಟಗಾರಿಕೆ ವಿಭಾಗಕ್ಕೆ ಹೋದಾಗ ಮತ್ತೆ ಈ ಬಳ್ಳಿ ಕಂಡೆ. ಆದರೆ ಅಲ್ಲೂ ಗಿಡಗಳನ್ನು ವೃದ್ಧಿ ಮಾಡಿರಲಿಲ್ಲ. 'ಗಿಡಗಳನ್ನು ಮಾಡಿದ ಕೂಡಲೇ ನಿಮಗೆ ತಿಳಿಸುತ್ತೇವೆ' ಎಂಬ ಆಶ್ವಾಸನೆಯೊಂದಿಗೆ ವಾಪಸ್ಸಾದೆ. ಹಾಗೂ ಹೀಗೂ ಹೊಸೂರು ಹತ್ತಿರದ ಒಂದು ನರ್ಸರಿಯಲ್ಲಿ ಈ ಹೂವು ಕಂಡ ಕೂಡಲೇ ಇದ್ದ ಎರಡೂ ಬಳ್ಳಿಯನ್ನು ತಂದು ಅದನ್ನು ನೆಲದಲ್ಲಿ ನಾಟಿ ಮಾಡಿದೆ. ಹೂಗಳು ಬಿಟ್ಟಾಗ ಕಣ್ಣು ತುಂಬುವ ಸೌಂದರ್ಯ!

ಈ ಬಳ್ಳಿ ಪ್ಯಾಸಿಫ್ಲೋರಾ ಜಾತಿಗೆ ಸೇರಿದೆ. ಈ ಜಾತಿಯಲ್ಲಿ ಅನೇಕ ಪ್ರಭೇದ-ಗಳಿದ್ದು ಹೆಚ್ಚಾಗಿ ಹೂವಿನ ಬಳ್ಳಿಗಳು ಕಂಡು ಬರುತ್ತವೆ. ಗಡಿಯಾರದ ಹೂವಿನ ಬಳ್ಳಿಗಳು ಸಾಮಾನ್ಯವಾಗಿ ಹಗುರವಾದ ಹೂವಿನ ಬಳ್ಳಿಗಳು. ತೆರೆಯಾಗಿ (ಸ್ಕ್ರೀನುಗಳಾಗಿ) ಬಳಸಲು ಸೂಕ್ತ ಬಳ್ಳಿಗಳು.

ಎಲ್ಲಕ್ಕಿಂತ ಮುಖ್ಯವಾಗಿ ಫ್ಯಾಷನ್ ಹಣ್ಣು (ಪ್ಯಾಸಿಫ್ಲೋರ್ ಎಡ್ಯುಲಸ್)

(8ನೇ ಪುಟ ನೋಡಿ)

ಪ್ಯಾಸಿಫ್ಲೋರಾ ಲಾರಿಫೋಲಿಯ

